# ಕರ್ನಾಟಕ ಜಾನಪದ ಪರಿಷತ್ತು

**ಜಾನಪದ ಲೋಕ**

ಸಂಸ್ಥಾಪಕರು : ನಾಡೋಜ ಎಚ್. ಎಲ್. ನಾಗೇಗೌಡ

ಅಧ್ಯಕ್ಷರು : ಶ್ರೀ ಟಿ. ತಿಮ್ಮೇಗೌಡ, ಐ.ಎ.ಎಸ್ (ನಿ)


ಮ್ಯಾನೇಜಿಂಗ್ ಟ್ರಸ್ಟಿ : ಶ್ರೀ ಆದಿತ್ಯ ನಂಜರಾಜ್

ಗೌರವ ಕಾರ್ಯದರ್ಶಿ : ಡಾ. ...ರ್. ರಾಜೇಗೌಡ


ದಿನಾಂಕ:

ಸನ್ಮಾನ್ಯರೆ,

## ಮನವಿ

**ವಿಷಯ: ಜಾನಪದ ಕಲಾವಿದರಿಗೆ ಪ್ರಶಸ್ತಿಗಾಗಿ ದತ್ತಿನಿಧಿ ಸಂಗ್ರಹಕ್ಕಾಗಿ ಕೋರಿಕೆ**

ಕರ್ನಾಟಕ ಜಾನಪದ ಪರಿಷತ್ತು ಕಳೆದ 38 ವರ್ಷಗಳಿಂದ ನಮ್ಮ ನಾಡಿನ ಜಾನಪದ ಕಲೆ, ಸಾಹಿತ್ಯ, ಸಂಸ್ಕೃತಿ, ಜಾನಪದ ಗೀತ ಗಾಯನ, ಜಾನಪದ ಕ್ರೀಡೆ, ಜಾನಪದ ವಸ್ತು ಮತ್ತು ಪರಿಕರಗಳ ಸಂಗ್ರಹ, ಜಾನಪದ ಸಂಪ್ರದಾಯ ಮತ್ತು ಚಟುವಟಿಕೆಗಳನ್ನು ಸಂರಕ್ಷಿಸಿ ಮುನ್ನಡೆಸುವ ಮಹತ್ಕಾರ್ಯವನ್ನು ನಿರ್ವಹಿಸುತ್ತಿದೆ. ದಿವಂಗತ ಶ್ರೀ ನಾಡೋಜ ಎಚ್. ಎಲ್ ನಾಗೇಗೌಡರು ಸಂಸ್ಥಾಪಿಸಿ ಬೆಳೆದು ಬಂದಿರುವ ಈ ಸಂಸ್ಥೆಯು ರಾಜ್ಯವ್ಯಾಪಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.

ಬೆಂಗಳೂರು–ಮೈಸೂರು ಹೆದ್ದಾರಿ ರಾಮನಗರ ಜಿಲ್ಲೆಯಲ್ಲಿರುವ 'ಜಾನಪದ ಲೋಕ' ರಾಜ್ಯದಲ್ಲೇ ಒಂದು ಪ್ರತಿಷ್ಠಿತ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದು ಬಂದಿದೆ. ಈ ಲೋಕದಲ್ಲಿ ಸಂಗ್ರಹವಾಗಿರುವ ಅಪರೂಪದ ಅಮೂಲ್ಯ ಜಾನಪದ ವಸ್ತು ಸಂಗ್ರಹಾಲಯವು ರಾಷ್ಟ್ರದಲ್ಲೇ ಪ್ರಖ್ಯಾತಿಯಾಗಿರುತ್ತದೆ. ಇದು ಜಾನಪದ ಕಲಾವಿದರ ತರಬೇತಿ, ಕಲಾ ಪ್ರದರ್ಶನ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೂ ಆಗಿರುತ್ತದೆ. ಇದನ್ನು ದಕ್ಷಿಣ ಭಾರತದ ಅತ್ಯುತ್ತಮ ಜಾನಪದ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಕರ್ನಾಟಕ ಜಾನಪದ ಪರಿಷತ್ತು ಅನೇಕ ಯೋಜನೆಗಳನ್ನು ರೂಪಿಸಿದೆ.

ಕರ್ನಾಟಕ ಜಾನಪದ ಪರಿಷತ್ತು ಪ್ರತಿ ವರ್ಷ ಫೆಬ್ರವರಿಯಲ್ಲಿ ಜಾನಪದ ಲೋಕದಲ್ಲಿ **'ಲೋಕೋತ್ಸವ'** ಎಂಬ ಹೆಸರಿನಲ್ಲಿ ಜಾತ್ರೆ ಸ್ವರೂಪದಲ್ಲಿ ನಾಡಿನ ಜಾನಪದ ಕಲಾವಿದರನ್ನು ಸೇರಿಸಿ ಆ ಸಮಯದಲ್ಲಿ ನಾಡಿನ ಹಿರಿಯ, ಉತ್ಕೃಷ್ಟ ಅತ್ಯುತ್ತಮ ಕಲಾವಿದರನ್ನು ಗುರುತಿಸಿ ಸನ್ಮಾನಿಸಲಾಗುವುದು. ಈ ಸನ್ಮಾನ ಕಾರ್ಯವನ್ನು ದತ್ತಿಗಳ ಮೂಲಕ ನಿರ್ವಹಿಸಿ ದತ್ತಿ ಹಣದಲ್ಲಿ ಕಲಾವಿದರಿಗೆ ಪ್ರಶಸ್ತಿಯನ್ನು ನೀಡಲಾಗುವುದು. ಈಗಾಗಲೇ ಅನೇಕ ದಾನಿಗಳು ನೀಡಿರುವ ದತ್ತಿಯಿಂದ ಪ್ರತಿವರ್ಷ ಕಲಾವಿದರಿಗೆ ಲೋಕೋತ್ಸವ ಸಂದರ್ಭದಲ್ಲಿ ದಾನಿಗಳ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ.

**ತಾವು ಯಾರ ಹೆಸರಲ್ಲಿ ದತ್ತಿ ಸ್ಥಾಪಿಸಬೇಕು ಎಂಬುದನ್ನು ತಿಳಿಸಿ ಕನಿಷ್ಟ ರೂ. 50,000 ದಿಂದ 1,00,000/- ರೂ. ಮೊತ್ತದ ದತ್ತಿ ಇಟ್ಟಲ್ಲಿ ಅದನ್ನು ಪ್ರತ್ಯೇಕವಾಗಿ ನಿಗದಿತ ಠೇವಣಿಯಲ್ಲಿಟ್ಟು ಅದರಿಂದ ಬರುವ ಬಡ್ಡಿಯ ಜೊತೆಗೆ ಸಂಸ್ಥೆಯ ಹಣವನ್ನು ಸೇರಿಸಿ ಲೋಕೋತ್ಸವ ಸಂದರ್ಭದಲ್ಲಿ ಒಬ್ಬ ಕಲಾವಿದರಿಗೆ ಕನಿಷ್ಟ 5,000/- ಮತ್ತು 10,000/- ರೂ.ಗಳ ಪ್ರಶಸ್ತಿಯನ್ನು ಪ್ರತಿ ವರ್ಷ ತಾವು ಸೂಚಿಸಿದ ಹೆಸರಿನಲ್ಲಿ ಪ್ರಶಸ್ತಿ ನೀಡಿ ಸನ್ಮಾನವನ್ನು ಮಾಡಲಾಗುವುದು. 'ಕರ್ನಾಟಕ ಜಾನಪದ ಪರಿಷತ್ತಿ'ಗೆ ದತ್ತಿ ನೀಡಿ ಕಲಾವಿದರಿಗೆ ಪ್ರಶಸ್ತಿ ನೀಡಲು ನೆರವಾಗಬೇಕೆಂದು ಕೋರಲಾಗಿದೆ.**

(ಟಿ. ತಿಮ್ಮೇಗೌಡ ಐ.ಎ.ಎಸ್(ನಿ))
ಅಧ್ಯಕ್ಷರು


**ಜಾನಪದ ಸಿರಿಭುವನ (ಕೇಂದ್ರ ಕಛೇರಿ)**

ನಂ. 1, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–560 054

ದೂರವಾಣಿ : 080–23605033, email : jaanapadaloka@gmail.com website : www.janapadaloka.in

ಜಾನಪದ ಲೋಕ (ರಾಮನಗರ ಜಿಲ್ಲೆ, ರಾಜ್ಯ ಹೆದ್ದಾರಿ) : 080–29782000